# ಶ್ರೀಮಾತೆ

ಮೂಲ ಬಂಗಾಳಿ : **ಆಶುತೋಷ್ ಮಿತ್ರ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

## ಭಾಗ ೨೦

## ಶ್ರೀಮಾತೆ : ನಾನಾ ಭಾವಗಳಲ್ಲಿ

॥ ೨೦ ॥

ದೈವೀ ಸಂಕಲ್ಪದಂತೆ, ದುರದೃಷ್ಟವಶಾತ್ ಶ್ರೀಮಾತೆಯವರ ಒಬ್ಬ ಶಿಷ್ಯನು[೧] ಶಾಶ್ವತವಾಗಿ ರಾಮಕೃಷ್ಣ ಸಂಘವನ್ನು ಬಿಟ್ಟು ಹೋಗಬೇಕಾಗಿ ಬಂತು. ಬೀಳ್ಕೊಡುವಾಗ ಶ್ರೀಮಾತೆಯವರೂ ಅಳುತ್ತಿದ್ದರು, ಶಿಷ್ಯನೂ ಅಳುತ್ತಿದ್ದ. ಹೀಗೆ ಸ್ವಲ್ಪ ಹೊತ್ತು ಕಳೆದ ನಂತರ, ಯಾರೋ ಬರುವ ಸಾಧ್ಯತೆಯನ್ನರಿತ ಶ್ರೀಮಾತೆ, ಸೆರಗಿನ ತುದಿಯಿಂದ ಕಣ್ಣುಗಳನ್ನು ಒರೆಸಿಕೊಂಡರು. ಶಿಷ್ಯನಿಗೂ ಬಚ್ಚಲು ಮನೆಯಲ್ಲಿ ಕಣ್ಣುಗಳನ್ನು ಒರೆಸಿಕೊಂಡು ಬರಲು ಹೇಳಿದರು. ಅನಂತರ ಹೇಳಿದರು, ''ಬಾ ಮಗೂ, ನಿನಗೆ ಎಲ್ಲಿ ಇರಬೇಕಾಗುವುದೋ, ಅಲ್ಲೇ ಹೋಗಿ ಇರು. ಇದನ್ನು ತಿಳಿ, ನಾನು ನಿನ್ನ ಬಳಿಯೇ ಯಾವಾಗಲೂ ಇದ್ದೇನೆ ಅಂತ. ಇದು (ತಮ್ಮ ದೇಹವನ್ನು ತೋರಿಸಿ) ಹೋದ ಮೇಲೂ ಹಾಗೆಯೇ. ನಗುತ್ತ, ನಲಿಯುತ್ತ, ಅಳುತ್ತ ಜೀವನ ಮಾಡು. ನಿನಗೇನೂ ಭಯವಿಲ್ಲ.'' ಶಿಷ್ಯ ಹೊರಡುವಾಗ, ಶ್ರೀಮಾತೆ ಕಿಟಕಿಯ ಬಳಿ ನಿಂತು, ಎಷ್ಟು ದೂರದವರೆಗೆ ಅವನು ಕಾಣಿಸುತ್ತಿದ್ದನೋ ಅಲ್ಲಿಯ ತನಕವೂ ಅವನನ್ನೇ ನೋಡುತ್ತ ನಿಂತರು. ಅನಂತರ ಶಿಷ್ಯನಿಗೆ ತಿಳಿದು ಬಂತು, ಅಂದು ಶ್ರೀಮಾತೆ ಊಟ ಮಾಡಲಿಲ್ಲ; ಇಡೀ ದಿನ ಅವರು ಅಳುತ್ತಿದ್ದರು ಎಂದು.

॥ ೨೧ ॥

ಶ್ರೀಮಾತೆಯವರ ದೇಹದಲ್ಲಿ ಸೀತಾಳೆಸಿಡುಬಿನ (small-pox) ಗುಳ್ಳೆಗಳು ಹಣ್ಣಾಗತೊಡಗಿದಾಗ, ಸೇವಕನು ಬೇವಿನ ಕಡ್ಡಿಯ ಮೂಲಕ ಅವುಗಳನ್ನು ಒತ್ತಿ, ಅನಂತರ ಅವುಗಳ ಕೀವನ್ನು ಹೊರ ಹಾಕಿ ಒರೆಸುತ್ತಿದ್ದ. ಅದನ್ನು ನೋಡಿದ ಡಾಕ್ಟರ್ ಕಾಂಜಿಲಾಲ್ ಶರತ್ ಮಹಾರಾಜರ ಅನುಮತಿಯಂತೆ ಸೇವಕನಿಗೆ ಇಂಜೆಕ್ಷನ್ ಹಾಕಿಸಿಕೊಳ್ಳಲು ಹೇಳಿದರು. ಅದಕ್ಕೆ ಒಪ್ಪದೆ ಸೇವಕ ಹೇಳಿದ: ''ಶ್ರೀಮಾತೆಯವರ ಸೇವೆ ಮಾಡುವುದಕ್ಕೆ ಇಂಜೆಕ್ಷನ್, ಔಷಧಿ ಏನೂ ಬೇಕಾಗುವುದಿಲ್ಲ.'' ಡಾಕ್ಟರ್ ಅದನ್ನು ಕೇಳದೆ ಬಲವಂತ ಮಾಡತೊಡಗಿದ. ಅಷ್ಟು ಸುಲಭವಾಗಿ ಅವನು ಬಿಡಲಾರನೆಂದು ತಿಳಿದ ಸೇವಕ, ಅಲ್ಲಿಂದ ಪಲಾಯನ ಮಾಡಿದ. ಡಾಕ್ಟರ್ ಅವನ ಹಿಂದೆಯೇ ಓಡತೊಡಗಿದ. ಅವನು ಹಲವು ಬಾರಿ ಓಡಿ, ಗಿರೀಶ ಚಂದ್ರನ ಮನೆಯ ಮುಂಬಾಗಿಲ ಮೂಲಕ ಒಳಹೊಕ್ಕು, ಕಿಟಕಿಯ ಮೂಲಕ ಹೊರಕ್ಕೆ ಓಡಿದ. ಆಗ ಗಿರೀಶಚಂದ್ರ ಮೇಲಂತಸ್ತಿನಲ್ಲಿ ಕುಳಿತಿದ್ದ. ಅವನು ಸೇವಕನನ್ನು ನೋಡಲಿಲ್ಲ. ಆದರೆ ಡಾಕ್ಟರ್ ಓಡುತ್ತಿದ್ದುದನ್ನು ಕಂಡು ಅವನನ್ನು ತನ್ನತ್ತ ಕರೆದ. ಎಲ್ಲ ಕಥೆಯನ್ನು ಕೇಳಿದ ನಂತರ ಗಿರೀಶ, ''ನೀನು ಅವನನ್ನು ಹಿಡಿಯಬಲ್ಲೆಯಾ? ಅವನು ಈಗಾಗಲೇ ಕಿಟಕಿ ಹಾರಿ ಓಡಿಹೋದ!'' ಎಂದ. ಡಾಕ್ಟರ್ ಶ್ರೀಮಾತೆಯವರ ಬಳಿಗೆ ಮರಳಿಬಂದು ದೂರಿದಾಗ ಅವರು ನಗುತ್ತ, ''ಸನ್ನಿವೇಶ ಭಾರೀ ಬಲವಾಗಿದೆ, ಗುರುಶಿಷ್ಯರು ಬೇರೆಯಾಗಿ ಕಾಣದೆ ಹೋಗಿದೆ!'' ಎಂದರು.

(ಮೂಲ ಬಂಗಾಳಿ: **'ಓ ಬಡೋ ಶಕ್ತ ಠಾಯಿ, ಗುರು-ಶಿಷ್ಯ ದೇಖಾ ನಾಯಿ'** - ಸಾಧನೆಯ ಅಂತಿಮ ಹಂತದಲ್ಲಿ ಗುರು-ಶಿಷ್ಯರು ಒಂದಾಗಿ ಬಿಡುತ್ತಾರೆ, ಭೇದವಿಲ್ಲ ಎಂಬರ್ಥದ ಗಾದೆ. ಅದನ್ನಿಲ್ಲಿ ಶ್ರೀಮಾತೆ ತಮಾಷೆಯಾಗಿ ಹೇಳಿದ್ದಾರೆ.)

॥ ೨೨ ॥

ಒಬ್ಬ ಭಕ್ತ ಒಂದು ಪುಸ್ತಕ ಬರೆಯಹೊರಟಿದ್ದ. ಒಂದು ಅಧ್ಯಾಯವನ್ನು ಬರೆದ ಮೇಲೆ ಅವನಿಗೆ ಕೆಲಸದ ಒತ್ತಡದಿಂದಾಗಿ ಮುಂದುವರೆಸಲಾಗಲಿಲ್ಲ. ಜಯರಾಮಬಾಟಿಗೆ ಹೋಗಿ ನಿಶ್ಚಿಂತೆಯಿಂದ ಅದನ್ನು ಬರೆದು ಮುಗಿಸುವುದಾಗಿ ಅವನು ಭಾವಿಸಿದ. ಅಲ್ಲಿ ಒಂದು ದಿನ ಅವರು ಇಲ್ಲದಿದ್ದಾಗ, ಒಬ್ಬಳು ಭಕ್ತೆ ಅವನ ಕೋಣೆಯನ್ನು ಸ್ವಚ್ಛಗೊಳಿಸುತ್ತಿದ್ದವಳು, ಆ ಬರಹವನ್ನು ಕಂಡಳು. ಅದನ್ನು ಆಕೆ ಶ್ರೀಮಾತೆಯವರ ಬಳಿಗೆ ತೆಗೆದುಕೊಂಡು ಹೋಗಿ, ಅವರಿಗೆ ಓದಿ ಹೇಳಿದಳು. ಊಟಮಾಡುವಾಗ ಶ್ರೀಮಾತೆ ಭಕ್ತನಿಗೆ, ''ನೀನು ತುಂಬ ಚೆನ್ನಾಗಿ ಬರೆಯುತ್ತೀಯಾ. ಪುಸ್ತಕವನ್ನು ಬರೆದು ಮುಗಿಸು'' ಎಂದರು. ಅವರ ಆಶೀರ್ವಾದ ಪಡೆದ ಭಕ್ತನಿಗೆ ಆನಂದವಾಯಿತು. ಅವನು ಅಲ್ಲೇ ಆ ಪುಸ್ತಕವನ್ನು ಬರೆದು ಮುಗಿಸಿದನು.

॥ ೨೩ ॥

ಒಬ್ಬಾಕೆ ಸೇವಕಿಯ[೧] ವಿಷಯವಾಗಿ ಶ್ರೀಮಾತೆ ಹೇಳುತ್ತಿದ್ದುದನ್ನು ಕೇಳಿದ್ದೇನೆ: ''ಅವಳೇನು ಕಡಿಮೆಯೆ? ನಾನೂ ಅವಳಿಗೆ ಹೆದರಿ ನಡೆದುಕೊಳ್ಳಬೇಕಾಗುತ್ತದೆ.''

---

೧ ವಿಶ್ವಾಸಾರ್ಹವಾದ ಮೂಲಗಳಿಂದ ನಮಗೆ ತಿಳಿದು ಬಂದಿದೆ, ಆ ಶಿಷ್ಯ ಸ್ವಯಂ ಲೇಖಕರೇ (ಆಶುತೋಷ ಮಿತ್ರ ) ಎಂದು. *(- ಸಂ.)*

೧ ವಿಶ್ವಾಸಾರ್ಹವಾದ ಮೂಲಗಳಿಂದ ತಿಳಿದಿರುವುದೇನೆಂದರೆ, ಆಕೆ ಸರಳಾ (ಮುಂದೆ ಪ್ರವ್ರಾಜಿಕಾ ಭಾರತೀಪ್ರಾಣಾ) ಎಂದು. *(- ಸಂ.)*

॥ ೨೪ ॥

ಶ್ರೀಮಾತೆ ಎಲ್ಲಿಗೆ ಹೋದರೂ, ತಾವು ಠಾಕೂರರ ಭಾವಚಿತ್ರದೊಂದಿಗೆ ಒಂದು ಸಣ್ಣ ಪೆಟ್ಟಿಗೆಯನ್ನು ಒಯ್ಯುತ್ತಿದ್ದರು. ಅದರಲ್ಲಿ ಸಿಂಹವಾಹಿನಿಯ ಮಣ್ಣು ಇರುತ್ತಿತ್ತು. ಪ್ರತಿದಿನ ಪೂಜೆಯ ನಂತರ ಅವರು ಅದನ್ನು ಒಂದಿಷ್ಟು ತಿನ್ನುತ್ತಿದ್ದರು.

॥ ೨೫ ॥

ಶ್ರೀಮಾತೆ ತುಂಬ ಬೆಳಿಗ್ಗೆಯೇ ಎದ್ದುಬಿಡುತ್ತಿದ್ದರು. ಬಟ್ಟೆ ಒಗೆದು ಬಂದು, ಜಪಮಾಲೆ ಹಿಡಿದು ಜಪಕ್ಕೆ ಕುಳಿತುಕೊಳ್ಳುತ್ತಿದ್ದರು. ಎಂಟು, ಒಂಬತ್ತು ಗಂಟೆಯ ಹೊತ್ತಿಗೆ ಶ್ರೀರಾಮಕೃಷ್ಣರ ಪೂಜೆ ಮಾಡುತ್ತಿದ್ದರು. ಪೂಜೆ ಮುಗಿದ ನಂತರ ಕಲ್ಲುಸಕ್ಕರೆಯ ಪಾನೀಯ ಕುಡಿಯುತ್ತಿದ್ದರು. ಮಧ್ಯಾಹ್ನ ಊಟವಾದ ನಂತರ ಸಾಧಾರಣವಾಗಿ ವಿಶ್ರಾಂತಿ ಪಡೆಯುತ್ತಿದ್ದರು. ಸಾಯಂಕಾಲ ನಾಲ್ಕು ಗಂಟೆಯ ಹೊತ್ತಿಗೆ ಮತ್ತೆ ಬಟ್ಟೆ ಒಗೆದು ಬಂದು, ಮಾಲೆ ಹಿಡಿದು ಜಪಕ್ಕೆ ಕುಳಿತುಬಿಡುತ್ತಿದ್ದರು. ರಾತ್ರಿ ಊಟದವರೆಗೂ ಅವರು ಜಪ ಮಾಡುತ್ತಿದ್ದರು. ನಡುವೆ ಸೂರ್ಯಾಸ್ತವಾದರೆ, ಒಂದು ಬಾರಿ ಸಂಧ್ಯಾರತಿ ಮಾಡುತ್ತಿದ್ದರು. ಪ್ರತಿದಿನ ನಾಲ್ಕು ಸಲ ಗುಲ[೩]ದಿಂದ ಹಲ್ಲು ಉಜ್ಜುತ್ತಿದ್ದರು. ಬೆಳಿಗ್ಗೆ ಬಟ್ಟೆ ತೊಳೆಯಲು ಹೋದಾಗ, ಮಧ್ಯಾಹ್ನ ಊಟವಾದ ಮೇಲೆ, ಸಾಯಂಕಾಲ ಬಟ್ಟೆ ತೊಳೆಯುವಾಗ ಹಾಗೂ ಕೊನೆಯಲ್ಲಿ ರಾತ್ರಿ ಊಟವಾದ ಮೇಲೆ. ಮತಿಹಾರಿಯ ಒಣಗಿದ ಹೊಗೆಸೊಪ್ಪು ಹಾಗೂ ನೆಲ್ಲುಹುಲ್ಲಿನ ಪುಡಿಯ ಬೂದಿಯನ್ನು ಮಿಶ್ರಣ ಮಾಡಿ ಗುಲವನ್ನು ತಯಾರಿಸುತ್ತಿದ್ದರು. ಗೋಲಾಪ್ ಮಾ ಕೈಯಿಂದ ತಯಾರಿಸಿದ ಗುಲವನ್ನು ಅವರು ತುಂಬ ಇಷ್ಟಪಡುತ್ತಿದ್ದರು.

॥ ೨೬ ॥

ಆಗ ನಾನು ಕಲ್ಕತ್ತೆಯಲ್ಲಿದ್ದೆ. ಜಯರಾಮಬಾಟಿಯಲ್ಲಿದ್ದ ಶ್ರೀಮಾತೆಯವರ ಪತ್ರದಿಂದ ನನಗೆ ತಿಳಿಯಿತು, ಮೂರು ಮಂದಿ ಶಿಷ್ಯಂದಿರು ಅವರ ಬಳಿ ದೀಕ್ಷೆ ಹಾಗೂ ಸಂನ್ಯಾಸ ಸ್ವೀಕಾರ ಮಾಡಿ, ಅಲ್ಲಿಂದ ಕಾಲುನಡಿಗೆಯಲ್ಲೇ ಕಾಶೀಯಾತ್ರೆಗೆ ಹೊರಟಿದ್ದಾರೆ ಎಂಬುದಾಗಿ. ಅವರು ಮೊದಲು ಬೇಲೂರು ಮಠಕ್ಕೆ ಬಂದಿರಲಿಲ್ಲ; ನೇರ ಶ್ರೀಮಾತೆಯವರ ಬಳಿಗೆ ಹೋಗಿ, ಅನಂತರ ಬೇಲೂರು ಮಠಕ್ಕೆ ಹೋಗಿದ್ದರು. ಅವರಲ್ಲಿ ಒಬ್ಬರು ನನ್ನನ್ನು ಬಹಳ ಪ್ರೀತಿಸುತ್ತಿದ್ದರು. ಅವರ ಹೆಸರು ಸ್ವಾಮಿ ಶಾಂತಾನಂದ (ಖಗೇನ್).[೪]

॥ ೨೭ ॥

ಸ್ವಾಮೀಜಿಯವರು ವ್ಯವಸ್ಥೆ ಮಾಡಿದ ಪ್ರಕಾರ ಶ್ರೀಮಾತೆಯವರ ಸಂಸಾರ ನಿರ್ವಹಣೆಗೆ ಪ್ರತಿ ತಿಂಗಳೂ ಇಪ್ಪತ್ತೈದು ರೂಪಾಯಿ ಬೇಲೂರು ಮಠದಿಂದ ಬರುತ್ತಿತ್ತು. ಯೋಗಿನ್ ಮಹಾರಾಜರ ವ್ಯವಸ್ಥೆಯಿಂದ ಗಿರೀಶಚಂದ್ರ, ಹಾಗೂ ಇನ್ನೂ ಒಂದೆರಡು ಜನ ಪ್ರತಿ ತಿಂಗಳೂ ಅಷ್ಟಿಷ್ಟು ಸಹಾಯ ಮಾಡುತ್ತಿದ್ದರು. ಅನಂತರ ಶರತ್ ಮಹಾರಾಜರ ವ್ಯವಸ್ಥೆಯಂತೆ ಮಿಸೆಸ್ ಓಲೇಬುಲ್[೫] ಪ್ರತಿ ತಿಂಗಳೂ ಸಹಾಯ ಮಾಡುತ್ತಿದ್ದಳು. ಇದಲ್ಲದೆ ಶ್ರೀಮಾತೆ ಜಯರಾಂಬಾಟಿಯಲ್ಲಿರುತ್ತಿದ್ದರೆ ನಮಗೆ ತಿಳಿದಿರುವಂತೆ ಈ ಕೆಳಗಿನ ಭಕ್ತರು ಅವರಿಗೆ ನಿಯಮಿತವಾಗಿ ಹಣ ಕಳುಹಿಸಿಕೊಡುತ್ತಿದ್ದರು:

| | |
|---|---|
| ಮಾಸ್ಟರ್ ಮಹಾಶಯ | ೧೦ ರೂಪಾಯಿ |
| ಲಲಿತ್ | ೧೦ ರೂಪಾಯಿ |
| ಸುಪ್ರಸಿದ್ಧ ಬ್ಯಾರಿಸ್ಟರ್ ಎನ್.ಎನ್. ಬ್ಯಾನರ್ಜಿಯ ತಾಯಿ | ೧೦ ರೂಪಾಯಿ |
| ಸ್ವಾಮಿ ತ್ರಿಗುಣಾತೀತಾನಂದ | ೫ ರೂಪಾಯಿ |

॥ ೨೮ ॥

ಶ್ರೀಮಾತೆ ಕಲ್ಕತ್ತೆಯ ವಿವಿಧ ಸ್ಥಳಗಳಿಗೆ ಹೋಗುತ್ತಿದ್ದರು, ಆದರೆ ದಕ್ಷಿಣೇಶ್ವರಕ್ಕೆ ಹೋಗಲು ಎಂದೂ ಬಯಸುತ್ತಿರಲಿಲ್ಲ — ಇದನ್ನು ನಾವು ಗಮನಿಸಿದ್ದೇವೆ.

॥ ೨೯ ॥

ಪುರಿಯಲ್ಲಿ ಪುರುಷೋತ್ತಮನ ದರ್ಶನ ಮಾಡುವಾಗ ಶ್ರೀಮಾತೆ ಒಬ್ಬ ಶಿಷ್ಯನ ಹಣೆಯನ್ನು ರತ್ನವೇದಿಕೆಗೆ ಸ್ಪರ್ಶ ಮಾಡಿಸಿ ಹೇಳಿದರು, ''ಗುರು, ಇಷ್ಟದೇವತೆ ಇವರನ್ನು ಒಂದೇ ಕಡೆ ನೋಡಬೇಕು — ನೋಡು.''

॥ ೩೦ ॥

ಕಲ್ಕತ್ತೆಯ ಹೊಸ ಮನೆಯಲ್ಲಿ ಒಂದು ದಿನ ಶ್ರೀಮಾತೆಯವರ ಪಾಯಿಖಾನೆಯನ್ನು ಅವರ ಸೇವಕನು ಸ್ವಚ್ಛಗೊಳಿಸುತ್ತಿದ್ದುದನ್ನು ನೋಡಿ, ಗೋಲಾಪ್ ಮಾ ತಮ್ಮ ತಲೆಗೂದಲಿನಿಂದಲೇ ಪ್ಯಾನನ್ನು ಸ್ವಚ್ಛಗೊಳಿಸಿದರು.

॥ ೩೧ ॥

ಶ್ರೀಮಾತೆ ಆಡುತ್ತಿದ್ದ ಭಾಷೆ ಸಾಮಾನ್ಯವಾಗಿ ಎರಡು ರೀತಿ ಇರುತ್ತಿತ್ತು. ನಮ್ಮೊಂದಿಗೆ ಕಲ್ಕತ್ತೆಯ ಭಾಷೆಯಲ್ಲಿ , ಹಾಗೂ ಹಳ್ಳಿಯಲ್ಲಿ ಸಾಮಾನ್ಯರ ಜೊತೆಗೆ ಮಾತನಾಡುವಾಗಲೋ, ತಮ್ಮ ಬಂಧುಗಳೊಂದಿಗೆ ಮಾತನಾಡುವಾಗಲೋ ಹಳ್ಳಿಯ ಭಾಷೆಯಲ್ಲಿ ಮಾತನಾಡುತ್ತಿದ್ದರು. ಹಾಗಿದ್ದರೂ ಅವರ ಪ್ರಾದೇಶಿಕ ಭಾಷೆ ಸಂಪೂರ್ಣವಾಗಿ ಶುದ್ಧವಾಗಿರಲಿಲ್ಲ , ಕಲ್ಕತ್ತೆಯ ಭಾಷೆಯೂ ಅದರೊಂದಿಗೆ ಮಿಶ್ರಿತವಾಗಿರುತ್ತಿತ್ತು.

---

೩ ಹೊಗೆಸೊಪ್ಪನ್ನು ಹುಡಿ ಮಾಡಿ, ಗುಳಿಗೆ ಮಾಡಿಟ್ಟುಕೊಂಡು, ಅದನ್ನು ಹಲ್ಲು ಉಜ್ಜಲು ಬಳಸುವುದು. ಗುಳಿಗೆಯೇ 'ಗುಲ'. *(- ಸಂ.)*

೪ ಉಳಿದ ಇಬ್ಬರು - ಸ್ವಾಮಿ ವಿಶುದ್ಧಾನಂದ (ಜಿತೇನ್ ಮಹಾರಾಜ್) ಹಾಗೂ ಸ್ವಾಮಿ ಗಿರಿಜಾನಂದ (ಗಿರಿಜಾ ಮಹಾರಾಜ್) ***('ಶ್ರೀ ಮಾ ಸಾರದಾ ದೇವಿ'**, ಸ್ವಾಮಿ ಗಂಭೀರಾನಂದ, ೧೯೮೪, ಪು.೩೬೨)* *(- ಸಂ.)*

೫ ಮಿಸೆಸ್ ಓಲೆಬುಲ್ ಬದುಕಿದ್ದಷ್ಟು ದಿನವೂ ಶ್ರೀಮಾತೆಯವರ ಸೇವೆಗಾಗಿ ಪ್ರತಿ ತಿಂಗಳೂ ಅರವತ್ತು ರೂಪಾಯಿ ಕಳುಹಿಸುತ್ತಿದ್ದಳು. *(- ಸಂ.)*

|| ೩೨ ||

ಒಬ್ಬ ಸೇವಕ ಯಾವುದೋ ಒಂದು ನಿರ್ಜನ ಪ್ರದೇಶದಲ್ಲಿ ತಪಸ್ಸು ಮಾಡುವ ಬಯಕೆಯನ್ನು ಹೇಳಿಕೊಂಡು ಶ್ರೀಮಾತೆಯವರ ಅನುಮತಿ ಕೋರಿದಾಗ ಅವರೆಂದರು: ''ಲಾಟು ಪಂಚವಟಿಯಲ್ಲಿ ಕುಳಿತು ತಪಸ್ಸು ಮಾಡುತ್ತಿದ್ದ. ಠಾಕುರ್ ಝಾವುತಲಾಗೆ ಹೋಗುವಾಗ ಅದನ್ನು ನೋಡಿ 'ಇಕೋ, ನೀನು ಯಾರನ್ನು ಕುರಿತು ಧ್ಯಾನ ಮಾಡುತ್ತಿದ್ದೀಯೋ, ಆಕೆ ಪಾತ್ರೆ ತೊಳೆಯುತ್ತಿದ್ದಾಳೆ, ಹಾಗೂ ಅಡುಗೆ ಮಾಡುತ್ತಾ ಸಾಯುತ್ತಿದ್ದಾಳೆ. ಅದರ ಕಡೆಗೆ ಗಮನ ಕೊಟ್ಟಿದ್ದೀಯಾ?' ಎಂದರು. ಅಂದಿನಿಂದ ಲಾಟು ನಹಬತ್‌ನಲ್ಲಿ ನನ್ನ ಪಾತ್ರೆ ತೊಳೆಯುತ್ತಿದ್ದ, ಬೇಳೆಕಾಳು ಅರೆಯುತ್ತಿದ್ದ, ಮೈದಾ ನಾದುತ್ತಿದ್ದ. ಆದ್ದರಿಂದ ನಿನಗೆ ಯಾವಾಗ ಹೋಗಬೇಕು ಅನ್ನಿಸಿತೋ, ಆಗ ಹೋಗಿ ಬಾ, ವಿಷ್ಣುಪುರಕ್ಕೆ ಹೋಗಿ ಲಾಲ್‌ಬಾಂಧ್‌ನಲ್ಲಿ ಇರು. ಅಲ್ಲಿ ಮೃಣ್ಮಯಿಯ ಅರ್ಚಕ ವೃದ್ಧ ಬ್ರಾಹ್ಮಣನಿದ್ದಾನೆ — ಅವನ ಬಳಿ ನನ್ನ ಹೆಸರು ಹೇಳು — ಅವನು ತುಂಬ ಆದರದಿಂದ ನಿನ್ನನ್ನು ಇರಿಸಿಕೊಳ್ಳುವನು. ಅನಂತರ ನಾನು ಹಳ್ಳಿಗೆ ಹೋಗುವಾಗ ಅಲ್ಲಿಗೆ ಹೋಗುತ್ತೇನೆ.''

|| ೩೩ ||

ಈ ಮೃಣ್ಮಯೀ ದೇವಿ ಪ್ರಕಟವಾದ ವಿಷಯವಾಗಿ ಶ್ರೀಮಾತೆಯವರಿಂದ ಕೇಳಿದ ಸಂಗತಿಯನ್ನೆಲ್ಲ ನೀಡುತ್ತೇನೆ: ''ಆ ಅರ್ಚಕ ಬ್ರಾಹ್ಮಣನ ಅವಸ್ಥೆ ಬಹಳ ದಯನೀಯವಾಗಿತ್ತು. ಒಂದು ದಿನ ಮೃಣ್ಮಯಿ ಕನಸಿನಲ್ಲಿ ಬಂದು, 'ನಾನು ಲಾಲ್‌ಬಾಂಧಿನ ನೀರಿನಲ್ಲಿದ್ದೇನೆ. ನನ್ನನ್ನೆತ್ತಿ ನನ್ನ ಸೇವೆ ಮಾಡು' ಎಂದು ಹೇಳಿದಳು. ಆ ಬ್ರಾಹ್ಮಣ ಅಲ್ಲಿಗೆ ಹೋಗಿ ನೋಡಿದಾಗ, ದೇವಿಯು ಅರ್ಧಭಾಗ ನೀರಿನಲ್ಲಿ ಮುಳುಗಿದ್ದಳು. ಆತ ಆಕೆಯನ್ನು ಅಲ್ಲಿಂದ ಎತ್ತಿ ತಂದು, ಲಾಲ್‌ಬಾಂಧಿನ ಘಾಟ್‌ನಲ್ಲೇ ಪ್ರತಿಷ್ಠೆ ಮಾಡಿ, ಅವಳ ಪೂಜೆ ಮಾಡಲು ಆರಂಭಿಸಿದ. ತಾಯಿಯ ಕೃಪೆಯಿಂದ ಆ ಬ್ರಾಹ್ಮಣನ ಅವಸ್ಥೆ ಕೂಡ ಉತ್ತಮಗೊಂಡಿತೆಂದೇ ಹೇಳಬೇಕು.''

|| ೩೪ ||

ಠಾಕೂರರ ಪೂಜೆಯಾದ ಮೇಲೆ ಶ್ರೀಮಾತೆ ತಮ್ಮ ಅಂತರಂಗದಲ್ಲೇ ತುಸು ಹೊತ್ತು ಮೌನವಾಗಿದ್ದುಕೊಂಡು, ಪಕ್ಕದಲ್ಲಿದ್ದ ಹೊಸ ಬ್ರಹ್ಮಚಾರಿಯನ್ನು ಕೇಳಿದರು, ''ನೀನು ಠಾಕೂರರನ್ನು ನೋಡಿದ್ದೀಯಾ? ಶ್ಯಾಮಾಪುಕುರದಲ್ಲಿ?'' ಬ್ರಹ್ಮಚಾರಿ ಹೇಳಿದ, ''ಆಗ ನನಗೆ ಐದು ವರ್ಷ ವಯಸ್ಸು. ಊರಿನ ಹೆಂಗಸರೆಲ್ಲ ಅವರನ್ನು ನೋಡಲು ಹೋಗಿದ್ದರು. ಅವರೊಂದಿಗೆ ನನ್ನ ತಾಯಿ ನನ್ನನ್ನು ಎತ್ತಿಕೊಂಡು ಹೋಗಿದ್ದಳು. ನಿಮಗೆ ಹೇಗೆ ಗೊತ್ತಾಯಿತು?''

ಶ್ರೀಮಾತೆ — ''ನಿನಗೆ ಲಾಡು ಕೊಡುವುದಕ್ಕಾಗಿ ಠಾಕೂರ್ ಸಿಕ್ಕ[೬]ದ ಕಡೆಗೆ ಸನ್ನೆ ಮಾಡಿದರೇನು? ಯಾರು ಕೊಟ್ಟರು, ನಿನಗೆ ನೆನಪಿದೆಯೆ?''

ಬ್ರಹ್ಮಚಾರಿ — ''ಹೌದು, ಒಬ್ಬಾಕೆ ಹೆಂಗಸು ತಂದುಕೊಟ್ಟಿದ್ದಳು.''

ಶ್ರೀಮಾತೆ — ''ಅದು ನಾನು.''

''ನೀವೆ!'' ಬ್ರಹ್ಮಚಾರಿ ಸ್ತಂಭೀಭೂತನಾದ.

ಶ್ರೀಮಾತೆ— ''ಇನ್ನೊಂದು ಬಾರಿ ಅವರನ್ನು ನೋಡಿದ್ದೆಯಾ?''

''ಹೌದು, ಅದು ಠಾಕೂರರ ದೇಹತ್ಯಾಗವಾದ ಮೇಲೆ, ಹಲವು ಸಮಯದ ಬಳಿಕ, ಪುರೀ ದೇವಾಲಯದಲ್ಲಿ.''

ಶ್ರೀಮಾತೆ— ''ನೀನು ಅವರನ್ನು ಕೈ ಸನ್ನೆ ಮಾಡಿ ಕರೆದಿದ್ದೆಯಾ?''

''ಆಗ ಅವರು ಕರೆದಿದ್ದರು, ನಾನೂ ಕರೆದಿದ್ದೆ.''

ಶ್ರೀಮಾತೆ— ''ಮಂದಿರದಲ್ಲಿ ಗದ್ದಲ ಕೇಳಿಬಂತು, ಹುಡುಗನಿಗೆ ದರ್ಶನವಾಗಿಬಿಟ್ಟಿದೆ ಅಂತ.''

''ನಿಮಗೆ ಇದೆಲ್ಲ ಹೇಗೆ ಗೊತ್ತಾಯಿತು?''

ಶ್ರೀಮಾತೆ – ''ನಾನು ಅಲ್ಲಿದ್ದೆ.''

ಬ್ರಹ್ಮಚಾರಿ ಮೈಮರೆತು ಶ್ರೀಮಾತೆಯವರ ಪಾದಗಳ ಮೇಲೆ ಇನ್ನೇನು, ಬೀಳಬೇಕೆಂದಿದ್ದ. ಅದಕ್ಕೆ ಅವಕಾಶ ನೀಡದೆ, ಶ್ರೀಮಾತೆ ಅವನಿಗೆ ದೀಕ್ಷೆ ನೀಡಿದರು. ಅನಂತರ ಅವನ ಕೆನ್ನೆಯ ಮೇಲೆ ಕೈಯಿಂದ ಸ್ಪರ್ಶ ಮಾಡುವ ಮೂಲಕ ಚುಂಬಿಸಿದರು.

|| ೩೫ ||

ಕೆಲವು ವರ್ಷಗಳ ನಂತರ ನಾವು ಈ ಘಟನೆಯ ಬಗ್ಗೆ ಪ್ರಸ್ತಾಪವೆತ್ತಿ , ಶ್ರೀಮಾತೆಯವರನ್ನು ಕೇಳಿದಾಗ ಹೀಗೆ ತಿಳಿದು ಬಂತು: ದೀಕ್ಷೆಗಾಗಿ ಬಂದವನನ್ನು ನೋಡಿದ ಕೂಡಲೇ ಅವರಿಗೆ ಅವನ ಹಿಂದಿನ ಜೀವನ ತಿಳಿಯುತ್ತಿತ್ತು; ಅದರೊಂದಿಗೆ ಅವನ ಪಾಲಿಗೆ ಮಂಗಳಕರವಾದ ಇಷ್ಟಮಂತ್ರ ಯಾವುದೋ ಅದು ಅವರಿಗೆ ಕಾಣಿಸುತ್ತಿತ್ತು ಎಂದು.

|| ೩೬ ||

ಹಿಂದಿನ ರಾತ್ರಿ ಶ್ರೀಮಾತೆ 'ಚೈತನ್ಯಲೀಲಾ' ನಾಟಕವನ್ನು ನೋಡಿ ಬಂದಿದ್ದರು. ಗಿರೀಶಚಂದ್ರ ವ್ಯವಸ್ಥೆ ಮಾಡಿದ್ದ— ಅದರಿಂದ ಶ್ರೀಮಾತೆ ಕುಳಿತುಕೊಳ್ಳಲು ರೇಲ್ ಬಾಕ್ಸನ್ನು ಬಿಟ್ಟುಕೊಡಲಾಯಿತು. ಬಹಳ ದಿನಗಳ ನಂತರ ಅಂದಿನ ರಾತ್ರಿಯ ಸಲುವಾಗಿ 'ಚೈತನ್ಯ ಲೀಲಾ' ನಾಟಕವನ್ನು ಆಡುವ ವ್ಯವಸ್ಥೆಯಾಗಿತ್ತು. 'ಜಗಾಯ್' ಪಾತ್ರವನ್ನು ಅರ್ಧೇಂದುಶೇಖರ ಆಡಿದ್ದ; 'ಮಾಧಾಯ್' ಪಾತ್ರವನ್ನು ಗಿರೀಶಚಂದ್ರನೇ ಆಡಿದ. ರಂಗಮಂಟಪದಲ್ಲಿ ಅವಕಾಶ ಪಡೆದಿದ್ದರೂ, ಭೂಷಣ ಎಂಬ ನಟಿ ಶ್ರೀಮಾತೆಗಾಗಿ ವೇತನವಿಲ್ಲದೆ 'ನಿಮಾಯ್'ಯ ರೂಪದಲ್ಲಿ ಕಾಣಿಸಿಕೊಂಡಳು. ಸುಶೀಲಾ 'ನಿತಾಯ್'ಯ ರೂಪದಲ್ಲಿ ಕಾಣಿಸಿಕೊಂಡಳು. ಅಭಿನಯಕ್ಕೆ ಮೊದಲು ಅವರಿಬ್ಬರೂ ಶ್ರೀಮಾತೆಗೆ ಪ್ರಣಾಮ ಮಾಡಿದ್ದರು. ಈ ವಿಷಯವಾಗಿ ಚರ್ಚೆಮಾಡುತ್ತ ಶ್ರೀಮಾತೆ ಹೇಳಿದರು, ''ಹುಡುಗಿಯನ್ನು

೬ ಸಿಕ್ಕ — ಹಗ್ಗದಿಂದ ಚಾವಣಿಗೆ ತೂಗುಹಾಕುತ್ತಾರೆ. ತಳದಲ್ಲಿ ಮಡಕೆ ಇತ್ಯಾದಿಗಳನ್ನಿಟ್ಟು, ಅದರಲ್ಲಿ ಆಹಾರ ಪದಾರ್ಥಗಳನ್ನು ಇಡುತ್ತಾರೆ.

(ಭೂಷಣ) ನೋಡಿದೆ, ಆಕೆ ಭಕಿಯುಳ್ಳವಳು. ಭಕ್ತಿಯಿಲ್ಲದಿದ್ದರೆ ಅದು ಸಾಧ್ಯವೆ? ನಿಮಾಯ್ ಅಂದರೆ ನಿಜವಾಗಿಯೂ ನಿಮಾಯ್ — ಆಕೆ ಹುಡುಗಿ ಅಂತ ಯಾರು ಹೇಳಿಯಾರು?'' ಅನಂತರ ಜಗಾಯ್-ಮಾಧಾಯ್ ವಿಷಯ ಬಂದಾಗ ಹೇಳಿದರು, ''ಅವರ ಹಾಗೆ ಭಕ್ತರು ಯಾರಿದ್ದಾರೆ? ರಾವಣನಂತೆ ಭಕ್ತರು ಯಾರಿದ್ದಾರೆ? ಹಿರಣ್ಯಕಶಿಪುವಿನಂತೆ ಭಕ್ತರು ಯಾರು? ಇದೇ ಗಿರೀಶಬಾಬು ಠಾಕೂರರಿಗೆ ಏನೆಲ್ಲ ಬಯ್ಯುತ್ತಿದ್ದ; ಆದರೂ ಅವನಂಥ ಭಕ್ತರು ಯಾರಿದ್ದಾರೆ? ಅವರೆಲ್ಲ ಈ ಭಾವದಿಂದಲೇ ಬಂದಿದ್ದಾರೆ. ಭಕ್ತ ನಾಗುವುದೇನು ಸಣ್ಣ ಸಂಗತಿಯೆ? ಸುಮ್ಮನೆ ಭಕ್ತಿಯುಂಟಾಗು ವುದೆ?'' ಮತ್ತೆ ಅವರು ಲಕ್ಷ್ಮೀದೀದಿಯ ಕಡೆಗೆ ತಿರುಗಿ ಹೇಳಿದರು, ''ಲಕ್ಷ್ಮೀ, ಅದೇನು? ಮುಕ್ತಿ ನೀಡಲು ಕಾತರನಲ್ಲ —?'' ಲಕ್ಷ್ಮೀ ದೀದಿ ಸ್ವರವೆತ್ತಿ ಹಾಡಿದಳು:

> ''(ನಾ) ಮುಕ್ತಿಯನೀಯಲು ಹಿಂಜರಿಯೆ;
> ಭಕ್ತಿಯ ನೀಡಲು ಹಿಂಜರಿವೆ ॥''

॥ ೩೭ ॥

ಶ್ರೀಮಾತೆ ಕೆಂಪು ಅಥವಾ ಕಪ್ಪು ಬಣ್ಣದ ತೆಳು ಅಂಚಿನ ಸೀರೆ ಯನ್ನು ಧರಿಸುತ್ತಿದ್ದುದನ್ನು ಪದೇ ಪದೇ ಕಂಡಿದ್ದೇವೆ. ಹೆಚ್ಚಿನ ಮಂದಿ ಭಕ್ತರು ಕೆಂಪು ತೆಳ್ಳನೆಯ ಅಂಚಿನ ಸೀರೆಯನ್ನೇ ನೀಡು ತ್ತಿದ್ದರು. ಕೆಲವರು ಮಾತ್ರ ಕಪ್ಪಂಚಿನದನ್ನು ಕೊಡುತ್ತಿದ್ದರು. ಅವರ ಕೈಯಲ್ಲಿ ಎರಡು 'ಹೋಗ್ಲಾಪಾಕಾ[೭] ಬಳೆ' ಹಾಗೂ ಕೊರಳಲ್ಲಿ ಚಿನ್ನದ ಕಟ್ಟು ಹಾಕಿಸಿದ, ಸಣ್ಣ ಸಣ್ಣ ರುದ್ರಾಕ್ಷಿಯ ಮಾಲೆ ಇರುತ್ತಿತ್ತು. ಆ ಮಾಲೆಯಲ್ಲಿ ೧೦೮ ಸಣ್ಣ ರುದ್ರಾಕ್ಷಿ ಮಣಿಗಳು ಇರುತ್ತಿದ್ದವು. ಅದನ್ನು ಯೋಗೇನ್ ಮಹಾರಾಜರ ಕಾಲದಲ್ಲಿ ಮಾಡಿಸಲಾಗಿತ್ತು. ನಮ್ಮ ಕಾಲದಲ್ಲಿ ಈ ರುದ್ರಾಕ್ಷಿಗಳು ಕಳೆದುಹೋಗಿ, ಒಂದೆಡೆ ಖಾಲಿ ಯಾಗಿತ್ತು. ಹೊಸ ರುದ್ರಾಕ್ಷಿಯ ಮಣಿಗಳನ್ನು ತಂದು, ಚಿನ್ನದ ಹೊಸ ಕಟ್ಟು ಹಾಕಿಸಿ, ಪೋಣಿಸಿ ಕೊಡಲಾಯಿತು. ಶ್ರೀಮಾತೆಗೆ ವಾತ ವಿದ್ದುದರಿಂದ, ಅವರ ಎರಡೂ ಪಾದಗಳ ನಡುವಿನ ಬೆರಳುಗಳಲ್ಲಿ ಲೋಹದ ತಂತಿಯ ಕಾಲುಂಗುರವಿರುತ್ತಿತ್ತು.

॥ ೩೮ ॥

ಶ್ರೀಮಾತೆ ವಾತದ ಕಾರಣದಿಂದ ಪ್ರತಿದಿನ ಸ್ನಾನ ಮಾಡದೆ, ದಿನ ಬಿಟ್ಟು ದಿನ ಮಾಡುತ್ತಿದ್ದರು. ಕಲ್ಕತ್ತೆಯಲ್ಲಿದ್ದರೆ ಗಂಗಾಸ್ನಾನ, ಜಯರಾಮಬಾಟಿಯಲ್ಲಿದ್ದರೆ 'ದೊಡ್ಡಕೆರೆ' (ಬಡೋ ಪುಕುರ್) ಯಲ್ಲಿ ಸ್ನಾನ ಮಾಡುತ್ತಿದ್ದರು. ಶ್ರೀಮಾತೆ ಊಟ ಮಾಡುವಾಗ ಅವರ ಬಳಿಯಲ್ಲಿ ನಾವು ಯಾರಾದರೂ ಕುಳಿತಿದ್ದರೆ, ಆಗ ಅವರು ಏನನ್ನು ತಿನ್ನುತ್ತಿದ್ದರೋ ಅದನ್ನೇ ಪ್ರಸಾದವಾಗಿ ನೀಡುತ್ತಿದ್ದರು. ತಾಂಬೂಲ ತಿನ್ನಲು ಕುಳಿತಿದ್ದರೆ, ಅದರ ಪ್ರಸಾದ ಕೊಡುತ್ತಿರಲಿಲ್ಲ. ತಾವೇ ಒಂದು ತಾಂಬೂಲವನ್ನು ತಂದು ಕೊಡುತ್ತಿದ್ದರು, ಅಥವಾ ಇತರರ ಮೂಲಕ ತಾಂಬೂಲವನ್ನು ತರಿಸಿ, ತಮ್ಮ ಕೈಯಿಂದಲೇ ಕೊಡಿಸುತ್ತಿದ್ದರು.

॥ ೩೯ ॥

'ಹರಿಯ ತಾಯಿ' ಎಂಬ ಒಬ್ಬಾಕೆ ಮಧ್ಯವಯಸ್ಸಿನ ವಿಧವೆ ಪ್ರತಿದಿನವೂ ಶ್ರೀಮಾತೆಯವರ ಬಳಿಗೆ ಬರುತ್ತಿದ್ದಳು. ಒಂದು ದಿನ ಮಧ್ಯಾಹ್ನ ಆಕೆ ತನ್ನ ಸಂಸಾರದ ಮನೋವ್ಯಥೆಯನ್ನೆಲ್ಲ ಶ್ರೀಮಾತೆಗೆ ನೆನಪಿಸಿ, ಇತರ ಮಾತುಗಳನ್ನಾಡುತ್ತಾ ಹೇಳಿದಳು: ''ಏನು ಮಾಡ ಲಮ್ಮಾ? ಅದು ಬಿಟ್ಟು ಹೋಗುವುದಿಲ್ಲ. ಇಲ್ಲಿ ನೋಡಿ, ನೀವು ರಾಧುವನ್ನು ಬಿಡಬಲ್ಲಿರಾ? ಅವಳನ್ನು ಬಿಟ್ಟು ಬದುಕಬಲ್ಲಿರಾ?''

ಶ್ರೀಮಾತೆ ಒಂದು ಅಸಾಧಾರಣ ನಗುವನ್ನು ಚೆಲ್ಲಿ ಉತ್ತರಿಸಿ ದರು: ''ನನ್ನ ವಿಷಯ ಬಿಟ್ಟು ಬಿಡು, ಹರಿಯ ತಾಯಿ!'' ಶ್ರೀಮಾತೆ ಯವರ ಆ ನಗು ಹಾಗೂ ಆ ಮಾತು ನಮ್ಮ ಹೃದಯದಲ್ಲಿ ಒಂದು ಹೊಸ ಮುದ್ರೆಯನ್ನು ಒತ್ತಿದಂತಾಗಿ, ಆಗ ನಾವು ಅವರನ್ನು ಏನೂ ಕೇಳದೆ ಸುಮ್ಮನಿದ್ದೆವು. ಅವರು ರಾತ್ರಿ ಊಟ ಮಾಡಿದ ನಂತರ ಆ ವಿಷಯವಾಗಿ ಒತ್ತಾಯಿಸಿ ಕೇಳಿದೆವು. ಆಗ ಅವರು ಕಾಯಲು ಹೇಳಿ, ಬಚ್ಚಲು ಮನೆಗೆ ಹೋದರು. ಮರಳಿ ಬಂದು ಕೈ, ಕಾಲು, ಒರೆಸಿಕೊಂಡು, ಹಾಸಿಗೆಯ ಮೇಲೆ ಕುಳಿತು ಹೇಳತೊಡಗಿದರು: ''ಅವರಿಗೆ ಏನು ತಿಳಿದೀತು? ನೋಡು — ನನಗೆ ರಾಧಿಯ ಮೇಲೆ ಮೋಹವಂತೆ! ಯಾರ ಮನೆಯಲ್ಲಿ ಹುಟ್ಟಿದ್ದೇವೋ ಅವರನ್ನು ನೋಡಿ ಕೊಳ್ಳಬೇಕು. ಅವರನ್ನು ತಾಯಿ ಅನ್ನು, ತಂದೆ ಅನ್ನು, ತಮ್ಮ ಅನ್ನು, ತಮ್ಮನ ಮಕ್ಕಳು ಅನ್ನು, ಅಪ್ಪ ಅನ್ನು — ಮಾಡಲೇಬೇಕು. ಯಾರೂ ಋಣವನ್ನು ಇಟ್ಟುಕೊಳ್ಳಬಾರದು. ಹೀಗಲ್ಲದಿದ್ದರೆ, ರಾಧಿ ಇತ್ಯಾದಿ ಇವರೆಲ್ಲ ನನಗೆ ಯಾರಂತೆ? ಠಾಕೂರ್ ಅವರ ತಾಯಿಯ ಸೇವೆ ಯನ್ನು ಎಷ್ಟೊಂದು ಮಾಡಿದ್ದಾರೆ, ರಾಮಲಾಲನನ್ನು ಕಾಳೀಮಂದಿ ರಕ್ಕೆ ಕಳುಹಿಸಿಕೊಟ್ಟು!'' ಈ ಮಾತಿನಿಂದ ಹೊಸ ಬೆಳಕು ಹರಿದಂತಾಗಿ ನಾನು ಕೇಳಿದೆ: ''ಹಾಗಿದ್ದರೆ ನಿಮ್ಮವರೇ ಆಗಿರುವ ಮಂದಿ ಯಾರೆಲ್ಲ?'' ಅದಕ್ಕೆ ಶ್ರೀಮಾತೆ, ''ಕಥಾಮೃತದಲ್ಲಿ 'ಸಾಂಗೋಪಾಂಗ' ವೆಂಬುದನ್ನು ಓದಿದ್ದೀಯಲ್ಲವೆ? ಠಾಕೂರರ ಮಂದಿ ಅನ್ನು, ನನ್ನ ಮಂದಿ ಅನ್ನು — ಆ ಗಂಡು, ಹೆಣ್ಣು ಮಕ್ಕಳೇ ನನ್ನ ಜನರು.'' ನಾನು ಕೇಳಿದೆ, ''ಹಾಗೇನು, ಅಮ್ಮಾ?'' ಅವರು ಹೇಳಿದರು, ''ಏಕೆ? ಅರ್ಥವಾಗಲಿಲ್ಲವೆ? ಅಲ್ಲಿ (ನನ್ನತ್ತ ತೋರಿಸಿ) ಏನಿದೆ?'' ಎಂದರು. ನಾನಂದೆ, ''ನೀವು.'' ಅದಕ್ಕೆ ಅವರು, ''ಇಲ್ಲೂ (ತಮ್ಮತ್ತ ತೋರಿಸಿ) ನೀವೇ — ಇದರಲ್ಲಿ ಮಾಯೆಯೇನೂ ಇಲ್ಲ; ಇದೇ ದೊಡ್ಡ ಸಂಬಂಧ, ಈ ಸಂಬಂಧದಿಂದಲೇ ಮತ್ತೆ ಮತ್ತೆ ಬಂದು ಹೋಗ ಬೇಕು. ತಿಳಿಯಿತೆ?'' ''ಹೌದಮ್ಮಾ.'' ''ಹೋಗು, ಈಗ ಮಲ ಗಿಕೋ. ಬರೆಯುತ್ತೀ ತಾನೆ?'' ''ಈಗಲೇ ಹೋಗಿ ಬರೆಯುತ್ತೇನೆ.'' ಶ್ರೀಮಾತೆ — ''ನೋಡುತ್ತೀಯೆ, ಜಗತ್ತಿನಲ್ಲಿ ಇನ್ನಾರೂ ನಿನ್ನವರು ಅಂತ ಇಲ್ಲ. ಆಗ ನಿನಗೆ ಚೆನ್ನಾಗಿ ತಿಳಿದೀತು, ಇದೆಂಥ ಸಂಬಂಧ ಅಂತ!''

*(ಮುಂದುವರಿಯುವುದು)*

---

೭ ನೀರಿನಲ್ಲಿ ಬೆಳೆಯುವ ಆನೆಜೊಂಡು (bulrush) ಹುಲ್ಲಿಗೆ 'ಹೋಗ್ಲಾ' ಎನ್ನುತ್ತಾರೆ. ಹೆಚ್ಚಾಗಿ ಗುಡಿಸಲು ನಿರ್ಮಾಣಕ್ಕೆ ಈ ಹುಲ್ಲನ್ನು ಬಳಸಲಾಗು ತ್ತದೆ. ಈ ಹುಲ್ಲಿನಂತೆ ಕುಸುರಿಯಿರುವ ಬಳೆಗೆ ಬಂಗಾಳಿಯಲ್ಲಿ 'ಹೋಗ್ಲಾ ಪಾಕಾ' ಬಳೆ ಎನ್ನುತ್ತಾರೆ. *(-ಅನು.)*